## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 301 |
| ಸದಸ್ಯರ ಹೆಸರು | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 23-09-2020 |
| ಉತ್ತರಿಸುವ ಸಚಿವರು: | ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ |

| | | |
|---|---|---|
| ಅ) | ಮೈಸೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಮದ್ದೂರು ಶಿವಪುರ ಮೂಲಕ ಕೊಪ್ಪ ನಾಗಮಂಗಲ ಬೆಳ್ಳೂರು ಕ್ರಾಸ್‌ನಲ್ಲಿ ಬೆಂಗಳೂರು ತುಮಕೂರು ರಸ್ತೆ ಎನ್ ಹೆಚ್ ಕೂಡುವ ರಸ್ತೆ ಅಭಿವೃದ್ಧಿಗೆ ಸರ್ಕಾರ ಅನುಮೋದನೆ ನೀಡಿದೆಯೆ? (ನೀಡಿದಲ್ಲಿ ವಿವರ ನೀಡುವುದು) | ಮೈಸೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಮದ್ದೂರು ಶಿವಪುರ ಮೂಲಕ ಕೊಪ್ಪ ನಾಗಮಂಗಲ ಬೆಳ್ಳೂರು ಕ್ರಾಸ್ ನಲ್ಲಿ ಬೆಂಗಳೂರು ತುಮಕೂರು ರಸ್ತೆ ಎನ್ ಹೆಚ್ ಕೂಡುವ ರಸ್ತೆಯು ಶಿರಾ-ನಂಜನಗೂಡು ರಾಜ್ಯ ಹೆದ್ದಾರಿ ಎಸ್.ಹೆಚ್-84ರ ಭಾಗವಾಗಿದ್ದು, ಒಟ್ಟು 68.96 ಕಿಮೀ ಉದ್ದವಿರುತ್ತದೆ.<br><br>ಸದರಿ ರಸ್ತೆಯ ಶಿವಪುರ ಸರ್ಕಲ್‌ನಿಂದ ಪ್ರಾರಂಭವಾಗಿ 0.00 ಕಿ.ಮೀ ರಿಂದ 26.16 ಕಿ.ಮೀ ರವರೆಗೆ (ಆಯ್ದ ಸರಪಳಿಗಳಲ್ಲಿ) |
| ಆ) | ಈ ರಸ್ತೆಯು ತುಂಬಾ ಹಾಳಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? | ಒಟ್ಟು 14.26 ಕಿ.ಮೀ ಉದ್ದದ ರಸ್ತೆಯನ್ನು 5.50 ಮೀ ಅಗಲಕ್ಕೆ ಅಭಿವೃದ್ಧಿಪಡಿಸಲು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-4 ರ ಪ್ಯಾಕೇಜ್ 330 (ಎ) ರಡಿ ಯೋಜಿಸಲಾಗಿದ್ದು 3.36 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದ್ದು ಉಳಿಕೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಇ) | ಎರಡೂ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? ವಿವರ ನೀಡುವುದು. | 26.16 ಕಿಮೀ ರಿಂದ 30.16 ಕಿಮೀ ವರೆಗಿನ ರಸ್ತೆಯು 10.00 ಮೀ. ಅಗಲವಿದ್ದು (double lane with paved shoulder) ಮದ್ದೂರು ಲೋಕೋಪಯೋಗಿ ಉಪವಿಭಾಗ ವ್ಯಾಪ್ತಿಯಲ್ಲಿದ್ದು, ಈ ಭಾಗವು ಸುಸ್ಥಿತಿಯಲ್ಲಿರುತ್ತದೆ.<br><br>30.16 ಕಿ.ಮೀ. ರಿಂದ 52.16 ಕಿ.ಮೀ. ರವರೆಗಿನ ರಸ್ತೆಯು ಕೆಶಿಪ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ರಸ್ತೆಯ ಕೌಡ್ಲೇಯಿಂದ ನಾಗಮಂಗಲದವರೆಗಿನ 23.26 ಕಿ.ಮೀ ಉದ್ದದ ರಸ್ತೆಯಲ್ಲಿ 21.58 ಕಿ.ಮೀ ಉದ್ದದ ರಸ್ತೆಯನ್ನು ಕೆಶಿಪ್-III ಯೋಜನೆಯ (ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಲ್ಲಿ) ಕೈಗೊಂಡಿರುವ (ರಾಜ್ಯ ಹೆದ್ದಾರಿ-85ರ ಮಾಗಡಿಯಿಂದ ಸೋಮವಾರಪೇಟೆವರೆಗಿನ ಒಟ್ಟು 166 ಕಿ.ಮೀ.ನಷ್ಟು ಉದ್ದದ ರಸ್ತೆ ಕಾಮಗಾರಿಯ) ಭಾಗವಾಗಿರುತ್ತದೆ. ಸದರಿ ರಸ್ತೆ ಕಾಮಗಾರಿಯನ್ನು ಹೈಬ್ರಿಡ್ ಆನ್ಯೂಟಿ ಮಾದರಿಯ ಗುತ್ತಿಗೆಯನ್ನು ರಿಯಾಯಿತಿದಾರರಾದ ಮೆ//.ಕೆ.ಎನ್.ಆರ್.ಕನ್ಸಟ್ರಕ್ಷನ್ಸ್‌ರವರಿಗೆ ವಹಿಸಿಕೊಡಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಯೋಜನೆಯನ್ನು |

| | | |
|---|---|---|
| | | ಒಪ್ಪಂದದನ್ವಯ ಫೆಬ್ರವರಿ–2022ಕ್ಕೆ ಪೂರ್ಣಗೊಳಿಸಲಾಗುವುದು. ಉಳಿದ 1.68 ಕಿ.ಮೀ. ರಸ್ತೆಯು ಸುಸ್ಥಿತಿಯಲ್ಲಿದೆ.<br><br>ಉಳಿದ 16.50 ಕಿ.ಮೀ. ಉದ್ದವು ನಾಗಮಂಗಲ ಬೆಳ್ಳೂರು ಕ್ರಾಸ್ ವರೆಗಿನ ರಸ್ತೆಯು ರಾಹೆ150ಎ ರ ಸರಪಳಿ 541.00 ಕಿ.ಮೀ. ರಿಂದ 557.80 ಕಿ.ಮೀ. ವರೆಗೆ ಇದ್ದು, (ನೆಲ್ಲಿಗೆರೆ – ಪಾಂಡವಪುರ ರಸ್ತೆ) ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯವ್ಯಾಪ್ತಿಯಲ್ಲಿರುತ್ತದೆ.<br><br>ಸದರಿ ರಸ್ತೆಯ (ರಾಹೆ 150ಎ) ಚೈ 544.20 ಕಿ.ಮೀ ರಿಂದ ಕಿ.ಮೀ 594.00 ಹೊಸಮನೆ ಕ್ರಾಸ್–ಪಾಂಡವಪುರ ಭಾಗದ ರಸ್ತೆಯನ್ನು ಎರಡು ಪಥ + ಪೇವಡ್ ಶೋಲ್ಡರ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ರೂ.166.67 ಕೋಟಿ ಮೊತ್ತಕ್ಕೆ ಇಪಿಸಿ ಯೋಜನೆಯಡಿಯಲ್ಲಿ ಗುತ್ತಿಗೆ ನೀಡಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು ಚೈ 540.175 ಕಿ.ಮೀ. ರಿಂದ ಕಿ ಮೀ 544.20 ರವರೆಗೆ ಚುಂಚನಗಿರಿ– ಹೊಸಮನೆ ಕ್ರಾಸ್ ವಿಭಾಗದ ರಸ್ತೆಯನ್ನು ನಿಯತಕಾಲಿಕ ನವೀಕರಣ ಯೋಜನೆಯಡಿ ಕೈಗೊಳ್ಳಲು ರೂ.1.05 ಕೋಟಿ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗುತ್ತಿದೆ. ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಕೈಗೂಳ್ಳಲಾಗುವುದು.<br><br>ಮೇಲೆ ವಿವರಿಸಿರುವಂತೆ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಹಾಗೂ ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗಿದೆ. |

ಲೋಇ 64 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಇಲಾಖೆ